# ಕರ್ನಾಟಕ ವಿಧಾನ ಪರಿಷತ್ತು
## ನೂರ ಐವತ್ತೆಂಟನೆಯ ಅಧಿವೇಶನ
## (ಮುಂದುವರೆದ ಉಪವೇಶನ)

# ಕರ್ನಾಟಕ ಪೊಲೀಸು (ತಿದ್ದುಪಡಿ) ವಿಧೇಯಕ, 2026
## (2026ರ ವಿಧಾನಸಭೆಯ ವಿಧೇಯಕ ಸಂಖ್ಯೆ–04)
## (ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)

ಕರ್ನಾಟಕ ಪೊಲೀಸು ಅಧಿನಿಯಮ, 1963ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪೊಲೀಸು ಅಧಿನಿಯಮ, 1963 (1964ರ ಕರ್ನಾಟಕ ಅಧಿನಿಯಮ 4)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಪೊಲೀಸು (ತಿದ್ದುಪಡಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 20-ಎಫ್ ತಿದ್ದುಪಡಿ.-** ಕರ್ನಾಟಕ ಪೊಲೀಸು ಅಧಿನಿಯಮ, 1963 (1964ರ ಕರ್ನಾಟಕ ಅಧಿನಿಯಮ 4)ರ ಪ್ರಕರಣ 20-ಎಫ್‌ರ, (1)ನೇ ಉಪಪ್ರಕರಣದಲ್ಲಿ,-

(i) ಮೊದಲನೇ ಪರಂತುಕದ, (ಸಿ) ಖಂಡಕ್ಕೆ ಬದಲಾಗಿ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,-

"(ಸಿ) ದುರ್ನಡತೆ ಅಥವಾ ಸಂಪೂರ್ಣ ನಿರ್ಲಕ್ಷತೆ ಅಥವಾ ಕರ್ತವ್ಯ ಲೋಪ ಅಥವಾ ನೈತಿಕ ಅಧಃಪತನದ ಕೃತ್ಯ ಮಾಡಿದ್ದಲ್ಲಿ ; ಅಥವಾ"

(ii) ಎರಡನೇ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
### (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಕರ್ನಾಟಕ ಪೊಲೀಸು ಅಧಿನಿಯಮ, 1963 (1964ರ ಕರ್ನಾಟಕ ಅಧಿನಿಯಮ 4)ರ 20ಎಫ್ ಪ್ರಕರಣದ, (1)ನೇ ಉಪಪ್ರಕರಣದ, (ಸಿ) ಖಂಡವನ್ನು ಪ್ರತಿಯೋಜಿಸಲು ಮತ್ತು ಎರಡನೇ ಪರತುಂಕವನ್ನು ಬಿಟ್ಟುಬಿಡಲು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

**ಡಾ. ಜಿ ಪರಮೇಶ್ವರ**
ಗೃಹ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**ಅನುಬಂಧ**

**ಕರ್ನಾಟಕ ಪೊಲೀಸು ಅಧಿನಿಯಮ, 1963ರ**

**(1964ರ ಕರ್ನಾಟಕ ಅಧಿನಿಯಮ 4) ಉದ್ಧೃತ ಭಾಗ**

**XXX XXX XXX**

**20ಎಫ್. ಪೊಲೀಸ್ ಠಾಣೆಗಳು, ವೃತ್ತ, ಉಪ-ವಿಭಾಗ, ಜಿಲ್ಲೆ ಮತ್ತು ವಲಯಗಳ ಪ್ರಭಾರದಲ್ಲಿರುವ ಅಧಿಕಾರಿಗಳ ಅಧಿಕಾರಾವಧಿ.-** ವಯೋನಿವೃತ್ತಿಗಳೊಪಟ್ಟು, ಕಾಲಕಾಲಕ್ಕೆ ಸರ್ಕಾರದಿಂದ ಅಧಿಸೂಚಿಸಬಹುದಾದಂಥ ಕಾರ್ಯಾಚರಣೆ ಕರ್ತವ್ಯಗಳು ಅಥವಾ ಅಂಥ ಇತರೆ ಕರ್ತವ್ಯಗಳನ್ನು ನಿರ್ವಹಿಸುತ್ತಿರುವ ಅಧಿಕಾರಿಗಳು, ಕನಿಷ್ಠ ಎರಡು ವರ್ಷಗಳ ಅಧಿಕಾರಾವಧಿಯನ್ನು ಹೊಂದಿರತಕ್ಕದ್ದು:

ಪರಂತು, ಪೊಲೀಸ್ ಸಿಬ್ಬಂದಿ ಮಂಡಲಿ ಅಥವಾ ಸರ್ಕಾರವು ಸಂದರ್ಭಾನುಸಾರ ಯಾರೇ ಅಧಿಕಾರಿಯನ್ನು,-

(ಎ) ಉನ್ನತ ಹುದ್ದೆಗೆ ಬಡ್ತಿ ಹೊಂದಿದಲ್ಲಿ; ಅಥವಾ

(ಬಿ) ಕ್ರಿಮಿನಲ್ ಅಪರಾಧದಲ್ಲಿ ನ್ಯಾಯಾಲಯದಿಂದ ಅಪರಾಧ ನಿರ್ಣೀತನಾಗಿದ್ದಲ್ಲಿ ಅಥವಾ ದೋಷಾರೋಪಣೆಗಳನ್ನು ಹೊರಿಸಲಾಗಿದ್ದಲ್ಲಿ; ಅಥವಾ

(ಸಿ) ಸೇವೆಯಿಂದ ವಜಾ ಮಾಡುವ, ತೆಗೆದುಹಾಕುವ, ಬಿಡುಗಡೆಗೊಳಿಸುವ ಅಥವಾ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆಯನ್ನು ವಿಧಿಸಿದಲ್ಲಿ ಅಥವಾ ಸಂಬಂಧಪಟ್ಟ ಶಿಸ್ತು ಪಾಲನಾ ಮತ್ತು ಅಪೀಲು ನಿಯಮಗಳ ಮೇರೆಗೆ ಕೆಳಗಿನ ದರ್ಜೆಗಿಳಿಸಿದ್ದಲ್ಲಿ; ಅಥವಾ

(ಡಿ) ಸದರಿ ನಿಯಮಗಳ ಉಪಬಂಧಗಳಿಗನುಸಾರವಾಗಿ ಸೇವೆಯಿಂದ ಅಮಾನತುಗೊಳಿಸಿದ್ದಲ್ಲಿ; ಅಥವಾ

(ಇ) ತನ್ನ ಪ್ರಕಾರ್ಯಗಳು ಮತ್ತು ಕರ್ತವ್ಯಗಳ ನಿರ್ವಹಣೆಯಲ್ಲಿ ಅಸಮರ್ಥತೆ ಹೊಂದಿದ್ದಲ್ಲಿ ದೈಹಿಕ ಅಥವಾ ಮಾನಸಿಕ ಅಸ್ವಸ್ಥತೆಯಿಂದ ಅನ್ಯಥಾ ಅಸಮರ್ಥತೆಯನ್ನು ಹೊಂದಿದ್ದಲ್ಲಿ; ಅಥವಾ

(ಎಫ್) ಬಡ್ತಿ, ವರ್ಗಾವಣೆ ಅಥವಾ ನಿವೃತ್ತಿಯ ಮೂಲಕ ಉಂಟಾದ ಖಾಲಿಸ್ಥಾನವನ್ನು ಭರ್ತಿ ಮಾಡುವ ಅಗತ್ಯವಿದ್ದಲ್ಲಿ; ಅಥವಾ

(ಜಿ) ಲಿಖಿತದಲ್ಲಿ ಸಂಬಂಧಪಟ್ಟ ಅಧಿಕಾರಿಯ ಕೋರಿಕೆಯ ಮೇಲೆ,

-ಕನಿಷ್ಠ ಅಧಿಕಾರಾವಧಿ ಮುಕ್ತಾಯವಾಗುವುದಕ್ಕೆ ಮುಂಚೆ ಆತನ ಹುದ್ದೆಯಿಂದ ವರ್ಗಾವಣೆ ಮಾಡಬಹುದಾಗಿದೆ:

ಮತ್ತೂ ಪರಂತು, ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿನ ದುರ್ನಡತೆ ಅಥವಾ ಸಂಪೂರ್ಣ ನಿರ್ಲಕ್ಷತೆ ಅಥವಾ ನೈತಿಕ ಅಧಃಪತನದ ಕೃತ್ಯದ ಕಾರಣದಿಂದಾಗಿ ತನ್ನ ಕನಿಷ್ಠ ಅವಧಿಯ ಮುಕ್ತಾಯಕ್ಕೆ ಮುಂಚೆ ಸರ್ಕಾರವು ಅಂಥ ಅಧಿಕಾರಿಯ ವರ್ಗಾವಣೆ ಮಾಡಬಹುದಾಗಿದೆ.

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ758 , ಪ್ರತಿಗಳು 300, 16ನೇ ಮಾರ್ಚ್ 2026